primary measures have been taken by the local authoritie such as vaccination, chlorinating the wells, etc, The Health Department officers at District Level have not taken constructive measures, There are some more cases reported from Kadoli village. Whethere the Government has called for any report in this behalf? will the Government grant a substantial compe nsation to the members of the diseased. I would like to know what the Hon'ble Minister for Health if going to do in this behalf

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಬೆಳಗಾಂ ಜಿಲ್ಲಾ ಆರೋಗ್ಯ ಅಧಿಕಾರಿಗಳ ವರದಿಯ ಪ್ರಕಾರ ದಿನಾಂಕ ೨೧-೬-೯೦ ರಂದು ಕರೋಳಿ ಮತ್ತು ಸುತ್ತಮುತ್ತಲಿನ ೯ ಗ್ರಾಮಗಳಲ್ಲಿ ವಾಂತಿ ಭೇದಿ ರೋಗಗಳ ೧೧ ಪ್ರಕರಣಗಳು ವರದಿಯಾಗಿವೆ. ಇವುಗಳಲ್ಲಿ ಇಬ್ಬರು ರೋಗಿಗಳು ಬೆಳಗಾಂ ಜಿಲ್ಲಾ ಆಸ್ಪತ್ರೆಯಲ್ಲಿ ಮರಣ ಹೊಂದಿದ್ದಾರೆ. ಸಂಪೂರ್ಣ ಮಾಲ ಪರೀಕ್ಷೆಯ ನಂತರ ಇಲ್ಲಿಯ ಯಾವ ಪ್ರಕರಣಗಳೂ ಕಾಲರಾ ಆಲ್ಲವೆಂದು ದೃಢಪಟ್ಟಿದೆ. ಜಿಲ್ಲೆಯಲ್ಲಿ ಲೇಟೆ ತಾರೀಖಿನಿಂದ ಈಚೆಗೆ ಜಿಲ್ಲಾ ಆರೋಗ್ಯ ಇಲಾಖೆಯು ಕಾಲರಾ ಪ್ರತಿಬಂಧಕವಾಗಿ ಕ್ರಮ ತೆಗೆದುಕೊಂಡಿದ್ದು, ಒಟ್ಟು ೮,೫೩೧ ಜನರಿಗೆ ಪ್ರತಿಬಂಧಕ ಚುಚ್ಚುಮದ್ದು ನೀಡಲಾಗಿದೆ. ಮತ್ತು ಕಡೋಳಿ ಹಾಗೂ ಉಳಿದ ಗ್ರಾಮಗಳಲ್ಲಿಯು ಬಾವಿಗಳನ್ನು ಶುದ್ಧೀಕರಣ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಸದ್ಯಕ್ಕೆ ಒಂದು ೩ ತಿಂಗಳ ಮಗು ವಾಂತಿ ಭೇದಿ ಪ್ರಕರಣದಲ್ಲಿ, ಬೆಳಗಾಂ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿವೆ.

೪. ಮೂಡಿಗೆರೆ ಟೌನಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.

ಶ್ರೀಮತಿ ಮೋಟಮ್ಮ.—ಮೂಡಿಗೆರೆ ಟೌನ್ ಮಧ್ಯಕಾಲಿಕ ಮಂಡಲವಾಗಿದ್ದು, ಇಲ್ಲಿನ ಟೌನಿಗೆ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿರುವುದಿಲ್ಲ. ಇರುವ ೧೦ ಹೆಚ್. ಪಿ. ಮೋಟಾರು ಆಗಾಗ ಸುಟ್ಟು ಹೋಗುತ್ತಿರುತ್ತವೆ. ವಾರಗಟ್ಟಲೆ ರಿಪೇರಿಯಿಂದಾಗಿ ನೀರು ಇರುವುದಿಲ್ಲ. ಹಾಗೆಯೇ ಈಗ ಇರುವ ನೀರಿನ ಶೇಖರಣ ಟ್ಯಾಂಕ್ ಚಿಕ್ಕದಾಗಿದ್ದು ಈಗ ಟೌನಿನ ಹೆಚ್ಚಿರುವ ಜನಸಂಖ್ಯೆಗೆ ನೀರು ಒದಗಿಸಲಾಗುತ್ತಿಲ್ಲ. ದಯಮಾಡಿ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಕೂಡಲೆ ಬದಲಿ ವ್ಯವಸ್ಥೆಗೆ ಅನುಕೂಲ ಮಾಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿ ಕೋರುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೆ, ಪವರ್ ಫ್ಲಕ್ಚುಯೇಷನ್ ಇರುವುದರಿಂದ ಪಂಪುಸೆಟ್ ಆಗಿಂದಾಗ್ಗೆ ಕೆಟ್ಟು ಹೋಗುತ್ತಿದ್ದುದು ನಿಜ, ಅದನ್ನು ಈಗ ಸರಿಪಡಿಸಲಾಗಿದೆ. ಇದಕ್ಕೆ ಪರ್ಮನೆಂಟ್ ಸೆಲ್ಯೂಷನ್ ಮಾಡಬೇಕಾದರೆ, ಹೇಮಾವತಿಯಿಂದ ನೀರು ತರಬೇಕಾಗುತ್ತದೆ. ಅದು ೭ ಕಿಲೋಮೀಟರ್ ದೂರದಲ್ಲಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ, ಹಾಗೆಂದಾಕ್ಷಣ ಕುಡಿಯುವ ನೀರಿನ ವ್ಯವಸ್ಥೆ ಯಾದರೂ ಇಲ್ಲ ಎಂದು ಯಾರೂ ಭಾವನೆ ಮಾಡಬಾರದು. ಏಕೆಂದರೆ ಮೂಡಿಗೆರೆ ಜನಸಂಖ್ಯೆ ೨೫೦೦ ಇದೆ. ೪ ಬಾವಿಗಳಲ್ಲಿ ೨೦ ಸಾವಿರ ಲೀಟರ್ ನೀರು ಸಿಗುತ್ತದೆ. ಮತ್ತೆ ಇಂಪ್ರೂವ್‌ಮೆಂಟ್ ಸ್ಕೀಮನ್ನು ೧೪ ಲಕ್ಷ ರೂಪಾಯಿ ಖರ್ಚುಮಾಡಿ ಮಾಡಿದ್ದಾರೆ. ಆದರಲ್ಲಿ ೩ ರಿಸರ್ವಾಯರ್‌ಗಳನ್ನು ಕಟ್ಟಿದ್ದಾರೆ. ಇವುಗಳ ಕೆಪಾಸಿಟಿ ೫೦,೦೦೦, ೬೦,೦೦೦ ಮತ್ತು ಇನ್ನೊಂದು ೬೦,೦೦೦ ಲೀಟರ್ಸ್ ಇದೆ. ಈ ರೀತಿ ರಿಸರ್ವಾಯರ್‌ಗಳಿವೆ. ನ್ಯಾಯವಾಗಿ ನೋಡಿದರೆ ೩ಲಕ್ಷದ ೪೦ ಸಾವಿರ ಲೀಟರ್ಸ್ ನೀರು ಅಲ್ಲಿ ಸಿಗಬೇಕು. ಆದರೆ ಪಂಪು ಮಾಡುತ್ತಿರುವುದು ೮ ತಾಸು ಮಾತ್ರ. ಆದರಿಂದ ನೀರು ಸ್ವಲ್ಪ ಕದಿಮೆಯಾಗಿದೆ. ಮತ್ತೆ ಬೇಸಿಗೆ ಕಾಲಕ್ಕೆ ನೀರಿನ ಆಭಾವ ಆಗುತ್ತದೆ, ಇತ್ತಿದ್ದರೂ ಕೂಡ ಇನ್ನೂ ಜಾಸ್ತಿ ನೀರು ಸರಬರಾಜು ಆಗಬೇಕು ಎಂದು ಇದ್ದರೆ ಹೇಮಾವತಿಯಿಂದ ನೀರು ತರುವುದೇ ಒಂದು ಪರ್ಮನೆಂಟ್ ಸೆಲ್ಯೂಷನ್, ಇದು ಸರ್ಕಾರದ ಪರಿಶೀಲನೆಯಲ್ಲಿದೆ.